**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

(ಇಂದು ದಿನಾಂಕಃ 20-07-**2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ವೈ.ವಿ.ಎಸ್. ವಕೀಲರಿಂದಃ**

1ನೇ ಆರೋಪಿತನು ಸಹ್ಯಾದ್ರಿ ಕ್ಯಾಶ್ಯು ಪ್ರೊಸೆಸನ ಮಾಲೀಕರು ಎಂದರೆ ಸರಿ. 2ನೇ ಆರೋಪಿತನು ಸಹ್ಯಾದ್ರಿ ಕ್ಯಾಶ್ಯು ಪ್ರೊಸೆಸನ ಮ್ಯಾನೇಜರ ಎಂದರೆ ಸರಿ. ನಾನು ಹುಬ್ಬಳ್ಳಿಯ ವ್ಯಾಪ್ತಿಗೆ 2008ರಲ್ಲಿ ನಿಯಕ್ತಿಗೊಂಡಿದ್ದು ಈ ಪ್ರಕರಣವು 2009ರಲ್ಲಿ ಆಗಿರುವುದರಿಂದ ನಾನು ಈ ಘಟನೆ ನಡೆದ ಫ್ಯಾಕ್ಟರಿಗೆ ಈ ಘಟನೆಯ ಪೂರ್ವದಲ್ಲಿ ಭೇಟಿ ನೀಡಿರುವುದಿಲ್ಲ. ನನಗೆ ಈ ಸಂಸ್ಥೆ ಇದ್ದ ಕುರಿತಾಗಿ ಮಾಹಿತಿ ಇತ್ತು.

ನನಗೆ ಕ್ಯಾಶು ಪ್ರೊಸೆಸಿಂಗನ ಕುರಿತಾಗಿ ಮಾಹಿತಿ ಇದೆ. ಕ್ಯಾಶು ಪ್ರೊಸೆಸಿಂಗ ಎಂದರೆ ಮೊದಲಿಗೆ ಒಳಗಿದ ಗೇರು ಬೀಜವನ್ನು ಬೇಯಿಸಿ ಅದನ್ನು ನಂತರದಲ್ಲಿ ಕತ್ತರಿಸಿ ಅದರ ಹೊರಪದರವನ್ನು ತೆಗೆದು ಅದರ ಒಳ ತಿರುಳು ಬೀಜವನ್ನು ತೆಗೆಯುತ್ತಾರೆ ಎಂದರೆ ಸರಿ. ನಂತರ ಅದನ್ನು ಒಣಗಿಸಿ ಪಿಲಿಂಗ್ ಮಾಡಿ ಗ್ರೆಡಿಂಗ್ ಅನ್ನು ಮಾಡುತ್ತಾರೆ. ಈ ಎಲ್ಲ ಕಾರ್ಯವು ಕಾಖಾರ್ನೆಯ ಮುಖ್ಯ ಭಾಗದಲ್ಲಿ ನಡೆಯುತ್ತದೆ ಎಂದರೆ ಸರಿ.

ಈ ಪ್ರಕರಣದ ಘಟನೆಯು ಕಾರ್ಖಾನೆಯ ಮುಖ್ಯ ಭಾಗದ ದಕ್ಷಿಣ ದಿಕ್ಕಿನ ಹೊರಗಡೆ ಗೋಡೆ ಪ್ಲಾಸ್ಟಿಂಗ್ ವಗೈರೆ ಸಿವಿಲ್ ವರ್ಕ್ಸಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಈ ಘಟನೆಯು ಸಿವಿಲ್ ವರ್ಕ್ಸ ಗೆ ಸಂಬಂಧಿಸಿದ್ದು ಆದರೆ ಅದು ಕಾರ್ಖಾನೆಯ ಕಟ್ಟಡದಲ್ಲಿ ನಡೆದಿರುತ್ತದೆ ಎಂದು ನುಡಿದಿರುತ್ತಾರೆ. ಸಿವಿಲ್ ವರ್ಕ್ಸಗೆ ಹಾಗೂಕ್ಯಾಶು ಪ್ರೊಸೆಸಿಂಗ್ ವರ್ಕಗೂ ಸಂಬಂಧ ಇಲ್ಲ ಎಂದರೆ

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಸರಿ. ಆದ್ದರಿಂದ ಫ್ಯಾಕ್ಟರಿಸ ಆ್ಯಕ್ಟನ ನಿಯಮವು ಈ ಪ್ರಕರಣದಲ್ಲಿ ಆದ ಅವಘಡಕ್ಕೆ ಸಂಬಂಧಿಸುವುದಲ್ಲ ಎಂದರೆ ಸರಿಯಲ್ಲ.

ನನಗೆ ಈ ಘಟನೆಯ ಕುರಿತಾಗಿ 1ನೇ ಆರೋಪಿತನು ಕರೆ ಮಾಡಿರುತ್ತಾರೆ. ನಾನು ದಿಃ 21-09-2009 ರಂದು ಮಧ್ಯಾಹ್ನ 12.00 ರಿಂದ 03.00 ಗಂಟೆಯ ಅವಧಿಯಲ್ಲಿ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ ನಾನು ಒಬ್ಬನೇ ಹೋಗಿರುತ್ತೇನೆ. ಸಾಕ್ಷಿ ಮುಂದುವಗಿರಿದು ನಾನು ಘಟನಾ ಸ್ಥಳಕೆಕ ಖಾಸಗಿ ವಾಹನವನ್ನು ಉಪಯೋಗಿಸಿದ್ದು ಆತನು ಹೊರಗಡೆ ಇದ್ದನು ಎಂದು ನುಡಿಯುತ್ತಾರೆ. ನಮ್ಮ ಫ್ಯಾಕ್ಟರಿಸ ಆ್ಯಕ್ಟನ ಪ್ರಕಾರ ಘಟನಾ ಸ್ಥಳದ ಪಂಚನಾಮೆ ಮಾಡುವ ಅವಶ್ಯಕತೆ ಇರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಛಾಯಾಚಿತ್ರಗಾರರವನ್ನು ಕರೆಸಿ ಛಾಯಾಚಿತ್ರವನ್ನು ತೆಗೆಸಿರುತ್ತೇನೆ. ಸದರಿ ಛಾಯಾಚಿತ್ರಗಾರರನ್ನು 1ನೇ ಆರೋಪಿತನು ಕರೆಸಿರುತ್ತಾನೆ. ನಂತರ 1ನೇ ಆರೋಪಿತನು ಎಲ್ಲ ಛಾಯಾಚಿತ್ರಗಳನ್ನು ಸಿಡಿಯೊಂದಿಗೆ ನನಗೆ ನೀಡಿರುತ್ತಾರೆ.

ಕಾರ್ಖಾನೆಯ ಗುತ್ತಿಗೆ ಯ ಕೆಲಸವನ್ನು ದಾಸಾ ಶಾನಭಾಗ ಇವರಿಗೆ ನೀಡಿದ್ದಾರೆ ಎಂದು 1ನೇ ಆರೊಪಿತನು ಹೇಳಿರುತ್ತಾರೆ, ನಾನು ಕಾಖಾನೆಗೆ ಭೇಟಿ ನೀಡಿದ್ದೇನೆ ಎನ್ನಲಾದ ದಿನದಂದು ದಾಸಾ ಶಾನಭಾಗ ಇವರನುನ ಸ್ಥಳಕ್ಕೆ ಕರೆದಿರುವುದಿಲ್ಲ. ನಾನು ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ದಾಸಾ ಶಾನಭಾಗರವರು ಕಾಖಾರ್ನೆಯಲ್ಲಿ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1ಬನೇ ಆರೋಪಿತರನುನ ತನ್ನ ಕಾರ್ಖಾನೆಯ ಗುತ್ತಿಗೆ ಕೆಲಸವನ್ನು ದಾಸಾ ಶಾನಭಾಗ ಇವರಿಗೆ ನೀಡಿರುತ್ತೇನೆ ಎಂದು ನನಗೆ ಬಳಿ ಹೇಳಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತನುನ ತನ್ನ ಕಾರ್ಖಾನೆಯ ಗುತ್ತಿಗೆ ಕೆಲಸವನ್ನು 3ನೇ ಆರೋಪಿತನಿಗೆ ನೀಡಿರರುವ ಬಗ್ಗೆ ನನಗೆ ಬಳಿ ತಿಳಿರುತ್ತಾರೆ.

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ನಾವು ಅವರನ್ನು ಆರೋಪಿತಯನ್ನು ಮಾಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ 3ನೇ ಆರೋಪಿತನನ್ನು ಆರೋಪಿಯನ್ನಾಗಿ ಮಾಡಲು ಕಾಯ್ದೆಯಡಿಯಲ್ಲಿ ಅವಕಾಶವಿಲ್ಲ ಎಂದು ನುಡಿಯುತ್ತಾರೆ.

2ನೇ ಆರೋಪಿ ಹಾಗೂ ದಯಾನಂದ ಕೃಷ್ಣ ಹಳಮರಕರ ಇವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ.2ನ್ನು ನಾನು ಅವಘಡ ನಡೆದ ಸ್ಥಳದಲ್ಲಿ ತಯಾರಿಸಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದ ದಿನಾಂಕದಂದು ಘಟನಾ ಸ್ಥಳದಲ್ಲ ನಿಪಿ.2ನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಖಾಲಿ ಹಾಳೆಯ ಮೇಲೆ 1ನೇ ಆರೋಪಿಯ ಸಂಸ್ಥೆಯ ಶೀಲು ಹಾಗೂ ಸಹಿಯನ್ನು ಪಡೆದುಕೊಂಡು ನಂತರದಲ್ಲಿ ಸದರಿ ದಾಖಲಾತಿಯನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2ನ್ನು ನಾನು 1ನೇ ಆರೋಪಿಯ ಕಾರ್ಖಾನೆಯಲ್ಲಿ ತಯಾರಿಸಿದ್ದೇನೆ ಎಂಬುವುದನ್ನು ಖಾತ್ರಿಪಡೆಸಲು ಬೇರೆ ಸಾಕ್ಷಿದಾರರ ಸಹಿಯನ್ನು ಪಡೆಯಲು ತೊಂದೆರೆ ಇತ್ತಾ ಎಂದರೆ ಸಾಕ್ಷಿಯು 1ನೇ ಆರೋಪಿತನ ಸಹಿಯು ಸಾಕಾಗಿತ್ತು ಎಂದು ನುಡಿಯುತ್ತಾರೆ.

ನಿಪಿ.3 1 ಹಾಗೂ 2ನೇ ಆರೋಪಿತನಿಗೆ ನಿಪಿ.4 ಹಾಗೂ 5ರಂತೆ ದಿಃ 12-11-2009 ರಂದು ತಲುಪಿರುತ್ತದೆ ಎಂದರೆ ಸರಿ. ನಿಪಿ.3ಕ್ಕೆ 1 ಹಾಗೂ 2ನೇ ಆರೋಪಿತರು 14-11-2009 ರಂದು ಪ್ರತ್ಯುತ್ತರವನ್ನು ನೀಡಿರುತ್ತಾರೆ ಎಂದರೆ ಸರಿ. ಅದನ್ನು ಈಗಾಗಲೆ ನಿಡಿ.6 ಎಂದು ಗುರುತಿಸಲಾಗಿರುತ್ತದೆ. ನಿಡಿ.6ನ್ನು ನಿಡಿ.7ರ ಮುಖಾಂತರ Under Certificate of Postingನ ಮುಖಾಂತರ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1ನೇ ಆರೋಪಿತನು ದಿಃ 31-10-2009ರಂದು ನನಗೆ ಕೆಲೀವೊಂದು ದಾಖಲಾತಿಗಳನ್ನು ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಂ. ಸದರಿ ದಾಖಲಾತಿಗಳು ಯಾವುದು ಎಂದರೆ ಛಾಯಾಚಿತ್ರ, ಸಿಡಿ ಹಾಗೂ ಮರಣೋತ್ತರ ಪರೀಕ್ಷಾ ವರದಿ ಹಾಗೂ ಪ್ರ.ವ.ವರದಿಯನ್ನು ನೀಡಿರುತ್ತಾರೆ. ನನಗೆ 1ನೇ ಆರೋಪಿತನು ನಿಡಿ.1 ರಿಂದ 3ನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1ನೇ ಆರೋಪಿತನು ನಿಡಿ.1 ರಿಂದ 3 ಹಾಗೂ ಉಳಿದ ದಾಖಲಾತಿಗಳನ್ನು ನನಗೆ ಪ್ರೊಫೆಶನಲ್ ಕೊರಿಯರ್ ಮೂಲಕ ನಿಡಿ.4 ಹಾಗೂ 5ರಂತೆ ಕಳುಹಿಸಿದ್ದಾರೆ ಎಂದರೆ ಸಾಕ್ಷಿಯು ಈ ಮೇಲೆ ಹೇಳಿದ ದಾಖಲಾತಿಗಳನ್ನು ಹೊರತುಪಡಿಸಿ ನಿಡಿ.1 ರಿಂದ 3ನು ಕಳುಹಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ. 1 ರಿಂದ 3,6 ನನಗೆ ತಲುಪಿದ್ದರೂ ಕೂಡ ನಾನು ಸದರಿ ದಾಖಲಾತಿಗಳು ನನಗೆ ತಲುಪಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1ನ್ನು 1ನೇ ಆರೊಪಿತನು ನಮಗೆ ನೀಡಿರುತ್ತಾನೆ. ನಾನು ಈ ಪ್ರಕರಣವನ್ನು ದಾಖಲು ಮಾಡಲು ನಿಪಿ.8ರಂತೆ ಅನುಮತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೆಲಾಧಿಕಾರಿಗಳ ಬನಿಳಿ ಈ ಪ್ರಕರಣವನ್ನು ದಾಖಲಿಸಲು ಯಾವುದೇ ಅನಮತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.1ನೇ ಆರೋಪಿತನು ನಾನು ಕೇಳಿದ ಎಲ್ಲ ದಾಖಲಾತಿಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದಾನೆ ಎಂದರೆ ಸರಿಯಲ್ಲ. ದಿಃ 21-09-2009 ರಂದು ನಾನು ಘಸಿಟನಾ ಸ್ಥಳಕ್ಕೆ ಹೋದಂತಹ ಸಂದರ್ಭದಲ್ಲಿ ನಾನು ಕೆಳಿದಂತಹ ಮಾಹಿತಿ ಹಾಗೂ

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಲಭ್ಯವಿರುವಂತಹ ಎಲ್ಲ ದಾಖಲಾತಿಗಳನ್ನು ನನಗೆ ನೀಡಿದ್ದಾನೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಆತನಲ್ಲಿ ಲಭ್ಯವಿಲ್ಲದ ದಾಖಲಾತಿಗಳನ್ನು ಆತನು ನನಗೆ ನಂತರದಲ್ಲಿ ಕಳುಸಿದ್ದಾನೆ ಎಂದರೆ ಸರಿಯಲ್ಲ. 1 ಹಾಗೂ 2ನೇ ಆರೋಪಿತರದು ನಿಯಮ 136ನ್ನು ಉಲ್ಲಂಘಿಸಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತನು ನನ್ನವರ್ಕ ಆರ್ಡರನ ಮುಖಾಂತರ ಸದರಿ ಸಿವಿಲ್ ವರ್ಕನ್ನು 3ನೇ ಆರೊಪಿತದಿನಿಗೆ ವಹಿಸಿಕೊಟ್ಟಿರುವುದರಿಂದ 3ನೇ ಆರೋಪಿತನು ನಿಯಮ 79(ಎ)(ಬಿ)ಯನ್ನು ಉಲ್ಲಂಘಿಸಿಲ್ಲ ಎಂದರೆ ಸರಿಯಲ್ಲ. ಫ್ಯಾಕ್ಟರಿಸ ಆಕ್ಟ ಅಡಿಯಲ್ಲಿ 1 ಹಾಗೂ 2ನೇ ಆರೊಪಿತರು ಯಾವುದೇ ಅಪರಾಧವನ್ನು ಎಸಗಲಿಲ್ಲ ಎಂದರೆ ಸರಿಯಲ್ಲ. ನಿಪಿ.7 ಅವಘಡ ಸಂಭವಿಸಿದ ಕಾರ್ಖಾನೆಯ ವಸ್ತುಸ್ಥಿತಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ನಿಪಿ.7ರಟನ್ನು ನಾನು ಕಾರ್ಖಾನೆಯ ಒಳಗಡೆ ಈ ಅವಘಡ ಸಂಭವಿಸಿದೆ ಎಂದು ತೋರಿಸಲು ನನ್ನ ಕಚೇರಿಯಲ್ಲಿ ಕುಳಿತುಕೊಂಡು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.7 ಖಾಲಿ ಹಾಳೆಗೆ ನಾನು 1ನೇ ಆರೋಪಿತನ ಸಹಿಯನ್ನು ಪಡೆದುಕೊಂಡು ಅದನ್ನು ದುರುಪಯೋಗಪಡಿಸಿದ್ದೇನೆ ಎಂದರೆ ಸರಿಯಲ್ಲ. 1 ಹಾಗೂ 2 ಆರೋಪಿತರು ಯಜಾವುದೇ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ,

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಡಿ.ಎಸ್.ಬಿ.. ವಕೀಲರಿಂದಃ**

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ನಾನು ದಿಃ 31-10-2009 ರಲ್ಲಿ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು ವಿಭಾಗ-1 ಹುಬ್ಬಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು 1 ಮತ್ತು 2ನೇ ಆರೊಪಿತರು 12-09-2009ರಲ್ಲಿ ಪ್ರಕರಣವನ್ನು ದಾಖಲಿಸಿರುತ್ತೇನೆ. ನಾನು ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ದಿಃ 31-10-2009 ರಂದು ಸಲ್ಲಿಸಿದ ಎಲ್ಲ ದಾಖಲಾತಿಗಳನ್ನು ಓದಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಜಯಾ ತಂದೆ ಗಣೇಶ ಪಟಗಾರ ಇವರು ಸಲ್ಲಿಸಿದ ಫಿರ್ಯಾದಿಯ ಆಧಾರದ ಮೇಲೆರ ಸಂಪೂರ್ಣ ತನಿಖೆಯನ್ನು ಪೊಲೀಸರು ನಡೆಸಿದ್ದಾರೆ ಎಂದರೆ ಸಾಕ್ಷಿ ಯು 1ನೇ ಆರೋಪಿತಯು ನನಗೆ ಕೆವಲ ಪ್ರ,ವ.ವರದಿಯನ್ನು ನೀಡಿರುತ್ತಾನೆ ಎಂದು ಉತ್ತರಿಸುತ್ತಾರೆ. ನಂತರ ನಾನು ಸದರಿ ಪ್ರ.ವ.ವರದಿಯಂತೆ ಪೋಲಿಸರ ಮುಂದೆ ದಾಖಲಿಸಿದ ಪ್ರಕರಣವು ಏನಾಯಿತು ಎಂಬ ಬಗ್ಗೆ ವಿಚಾರಿಸಿರುವುದಿಲ್ಲ. ಸದರಿ ಪ್ರ.ವ.ವರದಿಯ ಅನ್ವಯ ದಾಖಲಾದ ಪ್ರಕರಣದಲ್ಲಿ ಮೃತ ವ್ಯಕ್ತಿಯು ತನ್ನ ನಿರ್ಲಕ್ಷತನದಿಂದ ದಿಃ 19-09-2009ರಂದು ಮೃತರಾಗಿರುತ್ತಾರೆ ಎಂದು ವರದಿ ಬಂದಿರುತ್ತದೆ ಎಂದರೆ ಸಾಕ್ಷಿ ಈ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ದಿಃ 31-10-2009ರಂದು 1ನೇ ಆರೊಪಿತನು ನನಗೆ ಪ.ವ.ವರದಿ, ಪಂಚನಾಮೆ ಹಾಗೂ ಭಾವಚಿತ್ರಗಳನ್ನು ಕಳುಹಿಸಿರುತ್ತಾನೆ ಎಂದರೆ ಸರಿ. ಅದೇ ದಿನಾಂಕದಂದು ನನಗೆ ವಿಜಾಯಾ ಗಣೆಪೇಶ ಪಟಗಾರ ಇವರು ಪೊಲೀಸರಿಗೆ ನೀಡಿದ ದೂರು, ಹಾಗೂ ಪುಲೀಸರು ಘಟನಾ ಸ್ಥಳದ ಪಂಚನಾಮೆ ಮಾಡಿದ ಕುರಿತಾಗಿ ದಾಖಲಾತಿ ಹಾಗೂ ಪೊಲೀಸರು ಸದರಿ ಪ್ರಕರಣದಲ್ಲಿ ವಿಚಾರಣೆ ಮಾಡಿದ ಎಲ್ಲ ಸಾಕ್ಷಿದಾರರ ಹೇಳಿಕೆ ಹಾಗೂ 19-09-2009 ರಂದು ಪೊಲೀಸರು ಸಲ್ಲಿಸಿದ ದೋ.ಪಟ್ಟಿಯನ್ನು

**ಸಿ.ಸಿ.ನಂ. 1149**/2009

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಸಹ ನನಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ದೋ.ಪಟ್ಟಿಯಲ್ಲಿ ಮೃತ ವ್ಯಕ್ತಿಯ ತಪ್ಪಿನಿಂದಾಗಿ ಈ ಅವಘಟಡವಾಗಿರುತ್ತದೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಬರೆದಿರಬಹುದು ಎಂದು ನುಡಿಯುತ್ತಾರೆ. ದೋ.ಪಟ್ಟಿಯನ್ನು ಪೊಲೀಸರು ಮೃತ ವ್ಯಕ್ತಿಗೆ ಸಂಬಂಧಿಸಿದಂತೆ abated ದೋ.ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಸಲ್ಲಿಸಿರಬಹುದು ಆದರೆ ನಾನು ಅದನ್ನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಅವಘಡವು ಮೃತ ವ್ಯಕ್ತಿಯ ತಪ್ಪಿನಿಂದ ಆಗಿದೆ ಎಂದು ತಿಳಿದಿದ್ದರೂ ಕೂಡ ನಾನು 1 ಹಾಗೂನ 2ನೇ ಆರರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನಡೆಸಿದಂತಹ ಸಂದರ್ಭದಲ್ಲಿ 3ನೇ ಆರೊಪಿತನನ್ನು ಕರೆಸಿ ವಿಚಾರಣೆ ಮಾಡಿರುವುದಿಲ್ಲ. 3ನೇ ಆರೋಪಿತನಿಗೂ ಹಾಗೂ ಈ ಪ್ರಕರಣಕಲ್ಲೂ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನಾನು 3ನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ